## ಎರೆಜಲ ತಯಾರಿಕೆ:

ಎರೆಜಲವು ಎರೆಹುಳುಗಳಿಂದ ತಯಾರಾಗುವ ಇನ್ನೊಂದು ಮುಖ್ಯ ಉತ್ಪನ್ನವಾಗಿದೆ. ಎರೆಹುಳು ಮತ್ತು ಅವುಗಳ ಹಿಕ್ಕೆಯ ಮೇಲೆ ನೀರು ಹರಿದು ಪೋಷಕಾಂಶಗಳು, ಕಿಣ್ವಗಳು ಹಾಗೂ ಹುಳುಗಳ ಮೈಮೇಲಿನ ರಂಧ್ರಗಳಿಂದ ಉಸಿರಾಟದ ಮೂಲಕ ಹೊರ ಬರುವ 'ಕೊಲೋಮಿಕ್' ಎಂಬ ದ್ರವವು ತೊಳೆದು ಎರೆಜಲ ಘಟಕದ ತಳಭಾಗದಲ್ಲಿ ಶೇಖರಣೆಯಾಗುತ್ತದೆ. ಎರೆಜಲವು ಒಂದು ಕಂದು ಬಣ್ಣದ ದ್ರವ ಇದನ್ನು ಬೆಳೆ ಪ್ರಚೋದಕವಾಗಿ, ಕೀಟನಾಶಕವಾಗಿ, ಲಘುಪೋಷಕಾಂಶವನ್ನಾಗಿ ಬಳಸಬಹುದು. ಪೌಷ್ಠಿಕ ಮೌಲ್ಯವಿರುವ ಈ ದ್ರವವನ್ನು ಗಿಡಗಳ ಬುಡಕ್ಕೆ ಹಾಯಿಸುವುದು ಅಥವಾ ಎಲೆಯ ಮೇಲೆ ಸಿಂಪಡಿಸಬಹುದು.

## ಎರೆಜಲ ಘಟಕದ ಸ್ಥಾಪನೆ:

ಸುಮಾರು 250 ಲೀಟರ್‌ನ ಬ್ಯಾರಲ್ ತೆಗೆದುಕೊಂಡು ಕೆಳಗಡೆ ಭಾಗದಲ್ಲಿ ಒಂದು ನಲ್ಲಿಯನ್ನು ಕೂಡಿಸಬೇಕು.

ಬ್ಯಾರಲ್ಲಿನ ಕೆಳಭಾಗದಲ್ಲಿ 25 ಸೆಂ.ಮೀ. ವರೆಗೆ ಮುರಿದ ಇಟ್ಟಿಗೆ ತುಂಡುಗಳು ಅಥವಾ ಕಲ್ಲು ಹರಳನ್ನು ಅಥವಾ ಬೆಣಚು ಕಲ್ಲು ತುಂಬಬೇಕು.

ಅದರ ಮೇಲೆ ಸುಮಾರು 25 ಸೆಂ.ಮೀ.ಯಷ್ಟು ಮರಳು ಸುರಿಯಬೇಕು. ಮರಳಿನ ಪದರದ ಮೇಲೆ ಸುಮಾರು 30 ಸೆಂ.ಮೀ.ನಷ್ಟು ಜೇಡಿ ಮಣ್ಣನ್ನು ಸುರಿದು ನೀರಿನಿಂದ ತೋಯಿಸಬೇಕು.

ಈ ಜೇಡಿ ಮಣ್ಣಿನ ಮೇಲೆ ಎರೆಹುಳುಗಳನ್ನು ಬಿಡಬೇಕು. ಮತ್ತು ಈ ಪದರಿನ ಮೇಲೆ ಸಗಣಿ ಮತ್ತು ಹುಲ್ಲನ್ನು ಸುಮಾರು 39-40 ಸೆಂ.ಮೀ. ಯಷ್ಟು ತುಂಬಬೇಕು. ನಂತರ ನೀರನ್ನು ಸಿಂಪಡಿಸಬೇಕು.

15 ದಿನಗಳ ವರೆಗೆ ಪ್ರತಿನಿತ್ಯ ನೀರನ್ನು ಸಿಂಪಡಿಸಬೇಕು. ಈ 15 ದಿನಗಳಲ್ಲಿ ಕೆಳಭಾಗದಲ್ಲಿರುವ ನಲ್ಲಿಯನ್ನು ಚಾಲೂ ಇಡಬೇಕು.

16ನೇ ದಿನದಿಂದ ನಲ್ಲಿಯನ್ನು ಬಂದ್ ಮಾಡಿಟ್ಟು, ಬ್ಯಾರಲ್ ಮೇಲೆ ತಳಭಾಗದಲ್ಲಿ ರಂಧ್ರವಿರುವ ಸುಮಾರು 5 ಲೀಟರ್‌ನ ಪಾತ್ರೆಯನ್ನು ಇಡಬೇಕು. ಮೇಲ್ಭಾಗದಲ್ಲಿರುವ ರಂಧ್ರವಿರುವ ಪಾತ್ರೆಯ ಮೂಲಕ ನಿಧಾನವಾಗಿ ಬ್ಯಾರಲ್‌ನಲ್ಲಿರುವ ವಸ್ತುಗಳ ಮೇಲ್ಭಾಗದಲ್ಲಿ ಸರಿಯಾಗಿ ಸಿಂಪರಣೆಯಾಗುವಂತೆ ವ್ಯವಸ್ಥೆ ಮಾಡಬೇಕು.

ಸಿಂಪರಣೆಯಾದ ನೀರು ಬ್ಯಾರಲ್ಲಿನಲ್ಲಿರುವ ವಿವಿಧ ಪದರಗಳ ಮೂಲಕ ಹರಿದು ಕೆಳಭಾಗದಲ್ಲಿ ಸಂಗ್ರಹವಾಗುತ್ತದೆ. ಮಾರನೆಯ ದಿನ ಸಂಗ್ರಹವಾದ ಜಲವನ್ನು ತೆಗೆದು ಉಪಯೋಗಿಸಬಹುದು.

## ಎರೆಜಲ ಘಟಕದ ನಿರ್ವಹಣೆ:

ನಿಯತಕಾಲಿಕವಾಗಿ (1 ರಿಂದ 2 ತಿಂಗಳು) ಹುಲ್ಲು ಮತ್ತು ಸಗಣಿಯ ಹೊದಿಕೆಯನ್ನು ಬದಲಿಸಬೇಕು.

ಬ್ಯಾರಲ್ಲಿನಲ್ಲಿರುವ ಉಳಿದ ವಸ್ತುಗಳನ್ನು ಸಂಪೂರ್ಣವಾಗಿ 10-12 ತಿಂಗಳಿಗೊಮ್ಮೆ ಬದಲಿಸಬೇಕು.

## ಎರೆಜಲ ಬಳಸುವ ವಿಧಾನ ಮತ್ತು ಸಮಯ:

ಎರೆಜಲವನ್ನು ಸಿಂಪರಿಸಲು ಬೆಳಗಿನ ಜಾವ ಮತ್ತು ಸಂಜೆ ಸೂಕ್ತ ಸಮಯ. ಒಂದು ಲೀಟರ್ ಎರೆಜಲವನ್ನು 10 ಲೀಟರ್ ನೀರಿನಲ್ಲಿ ಕರಗಿಸಿ ಗಿಡಗಳ ಬುಡಕ್ಕೆ ಅಥವಾ ಎಲೆಗಳಿಗೆ ಸಿಂಪರಣೆ ಮಾಡಬಹುದು.

## ಉಪಯೋಗಗಳು:

ಗಿಡಗಳಲ್ಲಿ ಕೀಟ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಗಿಡಗಳಲ್ಲಿ ದ್ಯುತಿಸಂಶ್ಲೇಷಣಾ ಕ್ರಿಯೆಯನ್ನು ಹೆಚ್ಚಿಸುತ್ತದೆ.

* * *


**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:**

**ನಿರ್ದೇಶಕರು,**
ಗೇರು ಸಂಶೋಧನಾ ನಿರ್ದೇಶನಾಲಯ (ಡಿ.ಸಿ.ಆರ್.)
ಮೊಟ್ಟೆತ್ತಡ್ಕ, ಪುತ್ತೂರು - 574 202, ದಕ್ಷಿಣ ಕನ್ನಡ
ದೂರವಾಣಿ: 08251-230902, 236409

**ಪ್ರಕಾಶಕರು**
**ಡಾ. ಯಂ. ಗಂಗಾಧರ ನಾಯಕ್**
**ನಿರ್ದೇಶಕರು**
ಗೇರು ಸಂಶೋಧನಾ ನಿರ್ದೇಶನಾಲಯ (ಡಿ.ಸಿ.ಆರ್.)
ಮೊಟ್ಟೆತ್ತಡ್ಕ, ಪುತ್ತೂರು - 574 202, ದಕ್ಷಿಣ ಕನ್ನಡ

**ವಿಷಯ ಸಂಗ್ರಹಣೆ ಮತ್ತು ನಿರೂಪಣೆ**
**ಡಾ. ಬಿ.ಎಂ. ಮುರಳೀಧರ, ಡಾ. ಸಿದ್ದಣ್ಣ ಸವದಿ, ಡಾ. ಸಂಶುದ್ದೀನ್ ಎಂ., ಡಾ. ಜೆ.ಡಿ. ಅಡಿಗ, ಡಾ. ಯಂ.ಜಿ. ನಾಯಕ್**

**ಟೈಪಿಂಗ್ / ಪೇಜ್ ಸೆಟ್ಟಿಂಗ್**
**ರವಿಶಂಕರ್ ಪ್ರಸಾದ್**

ಕೃಷಿ ಮತ್ತು ಅಲೈಡ್ ವಲಯ ಪುನ:ಶ್ಚೇತನಕ್ಕೆ ಸಂಬಂಧಿಸಿದಂತೆ ಈ ಪ್ರಕಟಣೆಯನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY-RAFTAAR) ಯಿಂದ ನೀಡಲಾಗುತ್ತಿದೆ.

ಮಾರ್ಚ್, 2019




# ಎರೆಹುಳು ಗೊಬ್ಬರ ಮತ್ತು ಎರೆಜಲ ತಯಾರಿಕೆ ಮತ್ತು ಕೃಷಿಯಲ್ಲಿ ಇವುಗಳ ಬಳಕೆ




ವಿಷಯ ಸಂಗ್ರಹಣೆ ಮತ್ತು ನಿರೂಪಣೆ

ಡಾ. ಬಿ.ಎಂ. ಮುರಳೀಧರ

ಡಾ. ಸಿದ್ದಣ್ಣ ಸವದಿ

ಡಾ. ಸಂಶುದ್ದೀನ್ ಎಂ.

ಡಾ. ಜೆ.ಡಿ. ಅಡಿಗ

ಡಾ. ಯಂ.ಜಿ. ನಾಯಕ್



ಐ.ಸಿ.ಎ.ಆರ್.- ಗೇರು ಸಂಶೋಧನಾ ನಿರ್ದೇಶನಾಲಯ
ದರ್ಬೆ (ಪಿ.ಓ.), ಪುತ್ತೂರು - 574 202
ದಕ್ಷಿಣ ಕನ್ನಡ, ಕರ್ನಾಟಕ

ಕೃಷಿಯಲ್ಲಿ ಹೆಚ್ಚು ಇಳುವರಿ ಪಡೆಯಲು ಸೂಕ್ತ ರೀತಿಯಲ್ಲಿ ನೀರು ಮತ್ತು ಗೊಬ್ಬರ ಪೂರೈಕೆ ಅತ್ಯಂತ ಅವಶ್ಯಕ. ರಾಸಾಯನಿಕ ಗೊಬ್ಬರ, ಕೀಟನಾಶಕ ಹಾಗೂ ಶಿಲೀಂಧ್ರನಾಶಕಗಳ ಯಥೇಚ್ಛ ಬಳಕೆಯಿಂದ ಫಲವತ್ತತೆ ಕ್ಷೀಣಿಸುತ್ತಿದೆ. ವಾತಾವರಣ ಕಲುಷಿತಗೊಳ್ಳುತ್ತಿದೆ ಹಾಗೂ ಕೃಷಿ ಉತ್ಪನ್ನಗಳಲ್ಲಿ ರಾಸಾಯನಿಕಗಳ ಉಳಿಯುವಿಕೆಯಿಂದ ಉತ್ಪನ್ನಗಳ ಗುಣಮಟ್ಟವೂ ಕಡಿಮೆಯಾಗುತ್ತಿದೆ. ಆದ ಕಾರಣ ಇತ್ತೀಚೆಗಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತಿದೆ. ಸಾವಯವ ಕೃಷಿಯಲ್ಲಿ ಎರೆಹುಳು ಗೊಬ್ಬರ ಬಳಕೆ ಒಂದು ಅತ್ಯಂತ ಪ್ರಮುಖವಾದ ಅಂಶವಾಗಿದೆ.

ಎರೆಹುಳು ಗೊಬ್ಬರ ಅತ್ಯಂತ ಪರಿಣಾಮಕಾರಿ ಸಾವಯವ ಗೊಬ್ಬರ. ಇದನ್ನು ಲಭ್ಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ರೈತರು ಸ್ವತಹ ತಯಾರಿಸಿಕೊಳ್ಳಬಹುದಾಗಿದೆ. ಆದುದರಿಂದ ವೈಜ್ಞಾನಿಕ ರೀತಿಯಲ್ಲಿ ಎರೆಹುಳುವಿನ ಗೊಬ್ಬರ ತಯಾರಿಕೆಯ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದು ಬಹಳ ಮುಖ್ಯ.

**ಎರೆಹುಳು ಗೊಬ್ಬರ:-** ಎರೆಹುಳು ಗೊಬ್ಬರ ಒಂದು ಸ್ಥಿರವಾದ ದುಂಡು ಹರಳಿನ ಸಾವಯವ ಗೊಬ್ಬರವಾಗಿದ್ದು ಇದರ ಬಳಕೆಯಿಂದ ಬೆಳೆಗಳಿಗೆ ಅಗತ್ಯವಿರುವ ಪೋಷಕಾಂಶಗಳು ಪೂರೈಕೆಯಾಗುವುದಲ್ಲದೇ, ಮಣ್ಣಿನ ಗುಣಮಟ್ಟವನ್ನು ಮತ್ತು ಸೂಕ್ಷ್ಮ ಜೀವರಾಶಿಗಳನ್ನು ಹೆಚ್ಚಾಗಿಸಬಹುದು. ಕೃಷಿ ಹಾಗೂ ಇನ್ನಿತರೇ ತ್ಯಾಜ್ಯ ವಸ್ತುಗಳನ್ನು ಎರೆಹುಳುಗಳು ಆಹಾರವನ್ನಾಗಿ ಬಳಸಿಕೊಂಡು ಜೀರ್ಣಿಸಿಕೊಂಡು ಹೊರ ಹಾಕುವ ಹಿಕ್ಕೆಗಳೇ ಎರೆಗೊಬ್ಬರ ತ್ಯಾಜ್ಯವಸ್ತುಗಳನ್ನು ಅತೀ ಬೇಗ ಫಲವತ್ತಾದ ಸಾವಯವ ಗೊಬ್ಬರವನ್ನಾಗಿ ತಯಾರಿಸಲು ಇದೊಂದು ಸುಲಭ ವಿಧಾನ. ಎರೆಗೊಬ್ಬರವನ್ನು ಕಪ್ಪು ಬಂಗಾರ ಎಂದು ಕರೆಯುತ್ತಾರೆ. ಎರೆಗೊಬ್ಬರದಲ್ಲಿ ಹೆಚ್ಚು ಪೋಷಕಾಂಶಗಳು, ಬೆಳೆ ಪ್ರಚೋದಕಗಳು ಹಾಗೂ ರೋಗ ನಿರೋಧಕ ಶಕ್ತಿಗಳೂ ಇರುತ್ತವೆ.

**ಎರೆಹುಳು ಗೊಬ್ಬರ ತಯಾರಿಸಲು ಬೇಕಾದ ಮುಖ್ಯ ತಾಂತ್ರಿಕತೆಗಳು:-**

1. ಕೃಷಿ ತ್ಯಾಜ್ಯ ವಸ್ತುಗಳನ್ನು ಕೊಳೆಯಲು ಇಡುವುದು - ವಿಭಜನೀಯವಾಗುವಂತಹ ತ್ಯಾಜ್ಯ ವಸ್ತುಗಳಾದ ಕೃಷಿ ತ್ಯಾಜ್ಯ, ಪ್ರಾಣಿ ಮತ್ತು ಪಕ್ಷಿ ಹಿಕ್ಕೆ, ಅಡುಗೆ ತ್ಯಾಜ್ಯ, ಕೃಷಿ ಹಾಗೂ ಕೈಗಾರಿಕೋದ್ಯಮಗಳ ತ್ಯಾಜ್ಯ, ಮಾರುಕಟ್ಟೆಯ ನಿರುಪಯುಕ್ತ ತ್ಯಾಜ್ಯ, ಹಸಿರು ಎಲೆಗಳು ಮುಂತಾದುವುಗಳನ್ನು ಒಂದೆಡೆ ಹಾಕಬೇಕು. ಕಸಕಡ್ಡಿ ದೊಡ್ಡದಾದಲ್ಲಿ ಅವುಗಳನ್ನು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಕತ್ತರಿಸಿ ರಾಶಿ ಹಾಕಬೇಕು.

2. ಸೂಕ್ತ ಜಾತಿಯ ಎರೆಹುಳುಗಳ ಆಯ್ಕೆ - ಎರೆಹುಳುಗಳನ್ನು ರೈತರ ಮಿತ್ರ ಎಂದು ಕರೆಯಲಾಗುತ್ತದೆ. ಭೂಮಿಯಲ್ಲಿರುವ ಎಲ್ಲಾ ಜಾತಿಯ ಹುಳುಗಳು ಗೊಬ್ಬರ ತಯಾರಿಸಲು ಯೋಗ್ಯವಾಗಿರುವುದಿಲ್ಲ. ವಿದೇಶಿ ತಳಿಗಳಾದ **ಯೂಡ್ರಿಲಸ್ ಯೂಜಿನಿಯಾ** (ಆಫ್ರಿಕನ್ ಹುಳು). **ಐಸೀನಿಯಾ ಫ್ಯೂಟಿಡಾ** (ಟೈಗರ್ ಎರೆಹುಳು) ಮತ್ತು **ಪೆರಿಯೋನಿಕ್ಸ್ ಎಕ್ಸ್ಕವೇಟಿಸ್** (ಕಂಪೋಸ್ಟ್ ಹುಳು) ಎರೆಹುಳುಗಳನ್ನು ಹೆಚ್ಚಾಗಿ ಗೊಬ್ಬರ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಈ ಎರೆಹುಳುಗಳು ನಮ್ಮ ಹವಾಗುಣಕ್ಕೆ ಹೊಂದಿಕೊಳ್ಳುವುದರೊಂದಿಗೆ ಹೆಚ್ಚು ವಂಶಾಭಿವೃದ್ಧಿ (ಸರಾಸರಿ ಮೂರು ದಿನಕ್ಕೆ ಒಂದರಂತೆ ಮೊಟ್ಟೆಯಿಡುವ ಶಕ್ತಿ) ಮಾಡುತ್ತವೆ ಹಾಗೂ ಹೆಚ್ಚು ಕಸುವನ್ನು ತಿಂದು ಜೀರ್ಣಿಸಿಕೊಂಡು ಹಿಕ್ಕೆ ರೂಪಕ್ಕೆ ಅದನ್ನು ಪರಿವರ್ತಿಸುತ್ತಿದೆ. (ಒಂದು ಕೆ.ಜಿ. ಹುಳು ಒಂದು ದಿನಕ್ಕೆ 5 ಕೆ.ಜಿ. ಕಸವನ್ನು ತಿನ್ನುವ ಶಕ್ತಿಯನ್ನು ಹೊಂದಿರುತ್ತವೆ). ಬೇಗನೆ ಬೆಳೆಯುವ ಮತ್ತು ಹೆಚ್ಚು ಸಾವಯವ ಪದಾರ್ಥಗಳನ್ನು ಸೇವಿಸಿ ಹೆಚ್ಚು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸುವ ಜೈವಿಕ ಕ್ರಿಯೆಯನ್ನು ಇದು ಹೊಂದಿರುತ್ತದೆ.

**ಗೊಬ್ಬರ ತಯಾರಿಕೆಯ ವಿಧಾನಗಳು:**

ಎರೆಹುಳು ಗೊಬ್ಬರವು ಮುಖ್ಯವಾಗಿ ಎರಡು ವಿಧಾನಗಳಲ್ಲಿ ತಯಾರಿಸಬಹುದಾಗಿದೆ.

**1. ಗುಂಡಿ ವಿಧಾನ:-** ಈ ವಿಧಾನದಲ್ಲಿ 6 ಅಡಿ ಉದ್ದ, 2 ಅಡಿ ಅಗಲ, 2 ಅಡಿ ಆಳದ ಗುಂಡಿಯನ್ನು ತೋಡಿ ಎರೆಹುಳು ಗೊಬ್ಬರವನ್ನು ತಯಾರಿಸಬಹುದು.

**2. ತೊಟ್ಟಿ ವಿಧಾನ:-** ಈ ವಿಧಾನವು ಹೆಚ್ಚು ಬಳಕೆಯಲ್ಲಿರುವುದು ಹಾಗೂ ಅನುಕೂಲವಾದುದು. 25 ಅಡಿ ಉದ್ದ 3 ಅಡಿ ಅಗಲ ಹಾಗೂ 2 ಅಡಿ ಎತ್ತರದ ತೊಟ್ಟಿಗಳನ್ನು ನಿರ್ಮಿಸಬೇಕು. ಈ ತೊಟ್ಟಿಯ ತಳಭಾಗದಲ್ಲಿ 3-4 ಕಿಟಕಿಗಳನ್ನಿಟ್ಟು ಜಾಲರಿಯಿಂದ ಮುಚ್ಚಿಡಬೇಕು.

ಗುಂಡಿ ಅಥವಾ ತೊಟ್ಟಿಯನ್ನು ತಣ್ಣಗಿರಲು ನೆರಳಿರುವ ಜಾಗದಲ್ಲಿ ಅದನ್ನು ನಿರ್ಮಿಸಬೇಕು, ಹಾಗೂ ಮಳೆ ಮತ್ತು ಬಿಸಿಲಿನಿಂದ ರಕ್ಷಿಸಲು ಚಪ್ಪರಗಳನ್ನು ನಿರ್ಮಿಸಬೇಕು.

**ಗುಂಡಿ ಅಥವಾ ತೊಟ್ಟಿ ತುಂಬುವ ವಿಧಾನ:**

ತೊಟ್ಟಿ ಅಥವಾ ಗುಂಡಿಯ ತಳಭಾಗದಲ್ಲಿ ನಿಧಾನವಾಗಿ ಕೊಳೆಯುವಂತಹ ಗಟ್ಟಿ ಕೃಷಿ ವಸ್ತುಗಳನ್ನು 15-20 ಸೆಂ.ಮೀ. ಹಾಕಬೇಕು.

ಅದರ ಮೇಲೆ ತಿಳಿಸಗಣಿ/ಜೈವಿಕ ಗೊಬ್ಬರಗಳನ್ನು ಸಿಂಪರಣೆ ಮಾಡಬೇಕು. ನಂತರ ಮಧ್ಯಮಗತಿಯಲ್ಲಿ ಕೊಳೆಯುವಂತಹ ತ್ಯಾಜ್ಯ ವಸ್ತುಗಳ 15-20 ಸೆಂ.ಮೀ. ಹಾಕಬೇಕು. ಇವುಗಳ ಮೇಲೆ ತಿಳಿ ಸಗಣಿಯನ್ನು ಸಿಂಪರಣೆ ಮಾಡಬೇಕು.

ಇವುಗಳ ಮೇಲೆ ಬೇಗ ಕೊಳೆಯುವ ತ್ಯಾಜ್ಯ ವಸ್ತುಗಳನ್ನು 30 ಸೆಂ.ಮೀ.ನಷ್ಟು ಹಾಕಬೇಕು. ಇದಾದ ನಂತರ ಸಗಣಿ ಸಿಂಪರಣೆ ಮಾಡಿ ಸುಮಾರು 2 ಕೆಜಿಯಷ್ಟು ಹುಳುಗಳನ್ನು ಪ್ರತಿ ಗುಂಡಿ / ತೊಟ್ಟಿಗೆ ಬಿಡಬೇಕು.

ಎರೆಹುಳುಗಳನ್ನು ಬಿಟ್ಟ ತಕ್ಷಣ ನೀರನ್ನು ಸಿಂಪರಣೆ ಮಾಡಬೇಕು. ಒಣಗಿದ ಎಲೆಗಳನ್ನು ಅಥವಾ ಗೋಣಿ ಚೀಲವನ್ನು ಗುಂಡಿ ಅಥವಾ ತೊಟ್ಟಿಯ ಮೇಲೆ ತೇವಾಂಶ ಕಾಪಾಡಲು ಹೊದಿಸಬೇಕು.

ಪ್ರತಿ ನಿತ್ಯವೂ ಗುಂಡಿ ಅಥವಾ ತೊಟ್ಟಿಗಳಿಗೆ ನೀರಿನ ಸಿಂಪರಣೆ ಮಾಡಬೇಕು. ಸುಮಾರು 45 ದಿನಗಳಲ್ಲಿ ಮೇಲ್ಪದರದಲ್ಲಿ ಎರೆಹುಳು ಗೊಬ್ಬರದ ಶೇಖರಣೆ ಕಂಡು ಬರುತ್ತದೆ. ಮತ್ತು 60-90 ದಿನಗಳಲ್ಲಿ ಎರೆಹುಳು ಗೊಬ್ಬರ ತಯಾರಾಗುತ್ತದೆ. (ಸುಮಾರು 75-90%ರಷ್ಟು ತ್ಯಾಜ್ಯ ವಸ್ತುವು ಗೊಬ್ಬರವಾಗಿ ಮಾರ್ಪಾಡಾಗಿರುತ್ತದೆ.)

ಸಂಗ್ರಹವಾದ ಗೊಬ್ಬರವನ್ನು ಪದರು ಪದರಾಗಿ ತೆಗೆಯಬೇಕು. ಗೊಬ್ಬರವನ್ನು ತೆಗೆಯುವ ಮುಂಚೆ 7 ದಿನಗಳ ಕಾಲ ನೀರಿನ ಸಿಂಪರಣೆಯನ್ನು ನಿಲ್ಲಿಸಬೇಕು. ಇದರಿಂದ ಎರೆಹುಳು ಮತ್ತು ಗೊಬ್ಬರವನ್ನು ಬೇರ್ಪಡಿಸಲು ಸಹಾಯವಾಗುತ್ತದೆ.

ಸಂಗ್ರಹವಾದ ಗೊಬ್ಬರವನ್ನು ಗುಂಡಿ ಅಥವಾ ತೊಟ್ಟಿಯಿಂದ ಹೊರ ತೆಗೆದ ಮೇಲೆ ನೆರಳಿನಲ್ಲಿ ಒಣಗಿಸಿ, ಸುಮಾರು 3-4 ಮಿ.ಮೀ. ರಂಧ್ರದ ಜರಡಿಯಿಂದ ಸಾಣಿಸಿ ಚೀಲದಲ್ಲಿ ತುಂಬಬೇಕು. ಸಾಣಿಸುವುದರಿಂದ ಎರೆಹುಳು ಕೋಶಗಳನ್ನು ಗೊಬ್ಬರದಿಂದ ಬೇರ್ಪಡಿಸಲು ಅನುಕೂಲವಾಗುತ್ತದೆ. ಸಂಗ್ರಹಿಸುವಾಗ ಗೊಬ್ಬರದಲ್ಲಿ ಸುಮಾರು 25-30%ರಷ್ಟು ತೇವಾಂಶ ಇರುವಂತೆ ನೋಡಿಕೊಳ್ಳಬೇಕು.

**ಎರೆಹುಳು ಗೊಬ್ಬರ ತಯಾರಿಕೆಯಲ್ಲಿ ಗಮನಿಸಬೇಕಾದ ಮುಖ್ಯ ಅಂಶಗಳು:**

1. ನಾವು ಹಾಕುವ ತ್ಯಾಜ್ಯ ವಸ್ತುಗಳಲ್ಲಿ ಪ್ಲಾಸ್ಟಿಕ್ ಅಥವಾ ರಾಸಾಯನಿಕ ವಸ್ತುಗಳು, ಕೀಟನಾಶಕಗಳು, ಗಾಜಿನ ತುಂಡು ಅಥವಾ ಕಬ್ಬಿಣ ತುಂಡುಗಳು ಇರದಂತೆ ಎಚ್ಚರ ವಹಿಸಬೇಕು.
2. ಇರುವೆಗಳನ್ನು ನಿಯಂತ್ರಿಸಲು ಗುಂಡಿ / ತೊಟ್ಟಿಯ ಸುತ್ತ ನೀರಿನ ಸಣ್ಣ ಚರಂಡಿಗಳನ್ನು ಮಾಡಿ ನೀರನ್ನು ನಿಲ್ಲಿಸಬೇಕು.
3. ತೊಟ್ಟಿಯಲ್ಲಿ 60-70% ರಷ್ಟು ತೇವಾಂಶವಿರುವಂತೆ ನೋಡಿಕೊಳ್ಳಬೇಕು. ಕೀಟ ತಿನ್ನುವ ಪಕ್ಷಿ ಮತ್ತು ಇಲಿಗಳಿಂದ ಕಾಪಾಡಲು ಗುಂಡಿ ಅಥವಾ ತೊಟ್ಟಿಯನ್ನು ತಂತಿಯ ಜಾಲರಿಯಿಂದ ಮುಚ್ಚತಕ್ಕದ್ದು.

**ಪೋಷಕಾಂಶಗಳು:**

ಎರೆಹುಳು ಗೊಬ್ಬರದ ಪೋಷಕಾಂಶಗಳ ಮಟ್ಟವು ಎರೆಹುಳುವು ತಿನ್ನಲು ಉಪಯೋಗಿಸುವ ತ್ಯಾಜ್ಯ ವಸ್ತುಗಳ ಮೇಲೆ ಅವಲಂಬಿತವಾಗಿರುತ್ತದೆ. ಸಾರಜನಕ 0.8 - 1.5%, ರಂಜಕ 0.5-1.3%, ಪೊಟ್ಯಾಷ್ 0.8-1.8%, ಕ್ಯಾಲ್ಸಿಯಂ 1.0 - 1.5%, ಮೆಗ್ನೇಷಿಯಂ 0.5%, ಸಲ್ಫರ್ 0.4 - 0.5%, ಕಬ್ಬಿಣ 1.0 - 1.4%, ಮ್ಯಾಂಗನೀಸ್ 700 - 730 ಪಿಪಿಎಂ, ತಾಮ್ರ 1175 - 1315 ಪಿಪಿಎಂ, ಝಿಂಕ್ 21 - 30 ಪಿಪಿಎಂ.

**ಎರೆಹುಳು ಗೊಬ್ಬರದ ಅನುಕೂಲತೆಗಳು:**

1. ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಗಳನ್ನು ಹೆಚ್ಚಿಸುತ್ತದೆ.
2. ಮಣ್ಣಿನ ರಸಸಾರವನ್ನು ನಿಯಂತ್ರಿಸುತ್ತದೆ ಹಾಗೂ ಮಣ್ಣಿನ ರಚನೆ, ನೀರು ಹಿಡಿದಿಡುವ ಗುಣ ಗಾಳಿಯಾಡುವ ಗುಣ ಮತ್ತು ಉಷ್ಣತೆಯನ್ನು ಸಮತೋಲನದಲ್ಲಿಡುತ್ತದೆ.
3. ಮಣ್ಣಿನ ಫಲವತ್ತತೆ ಹೆಚ್ಚಿಸುವುದಲ್ಲದೇ ಪರಿಸರ ಮಾಲಿನ್ಯವನ್ನು ತಡೆಗಟ್ಟುತ್ತದೆ.
4. ಎರೆಹುಳು ಗೊಬ್ಬರದ ಜೊತೆಗೆ ಜೈವಿಕ ಗೊಬ್ಬರದ ಮಿಶ್ರಣ ರೋಗವುಂಟು ಮಾಡುವ ಸೂಕ್ಷ್ಮಜೀವಿಗಳನ್ನು ನಿಯಂತ್ರಿಸುತ್ತದೆ.
5. ಬೆಳೆ ಸದೃಢವಾಗಿ ಮತ್ತು ಸಮೃದ್ಧವಾಗಿ ಬೆಳೆಯಲು ಬೇಕಾದ ಪೋಷಕಾಂಶಗಳು ಮತ್ತು ಪ್ರಚೋದಕಗಳನ್ನು ಪೂರೈಸುತ್ತದೆ.
6. ಸಾಂಪ್ರದಾಯಿಕವಾಗಿ ತಯಾರಿಸುವ ಗುಂಡಿ ಗೊಬ್ಬರ ತಯಾರಾಗಲು ಒಂದು ವರ್ಷ ಅಥವಾ ಹೆಚ್ಚು ಸಮಯ ಬೇಕಾಗುತ್ತದೆ ಮತ್ತು ಅದರ ಗುಣಮಟ್ಟ ಕಡಿಮೆಯಿರುತ್ತದೆ.
7. ರಾಸಾಯನಿಕ ಗೊಬ್ಬರಗಳ ಮೂಲಕ ನೀಡುವ ಪೋಷಕಾಂಶಗಳು ಪೋಲಾಗದಂತೆ ತಡೆದು ಅವುಗಳ ಪ್ರಯೋಜನ ಹೆಚ್ಚಿಸುತ್ತದೆ.
8. ಎರೆಹುಳು ಗೊಬ್ಬರದಲ್ಲಿ ಇಂಗಾಲ ಮತ್ತು ಸಾರಜನಕಗಳ ಅನುಪಾತ ಕಡಿಮೆಯಿರುವುದರಿಂದ ಪೋಷಕಾಂಶಗಳು ಬೆಳೆಗಳಿಗೆ ತ್ವರಿತವಾಗಿ ಲಭ್ಯವಾಗುತ್ತದೆ.
9. ಅಳವಡಿಸಿಕೊಳ್ಳಲು ಸುಲಭ. ಕಡಿಮೆ ಖರ್ಚು ಹಾಗೂ ಕಡಿಮೆ ಶ್ರಮ ಹೊಂದಿರುತ್ತದೆ ಹಾಗೂ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯಾಗುತ್ತದೆ.

**ಬಳಸುವ ವಿಧಾನ ಮತ್ತು ಪ್ರಮಾಣ:**

ಬಳಸುವ ವಿಧಾನ ಮತ್ತು ಪ್ರಮಾಣ ಬೆಳೆಯುವ ಬೆಳೆಗಳ ಮೇಲೆ ಅವಲಂಬಿತವಾಗಿರುತ್ತದೆ.

| **ಬೆಳೆಗಳು** | **ಪ್ರಮಾಣ** |
|---|---|
| ಕಡಿಮೆ ಅಂತರದ ಬೆಳೆಗಳು | 2 ರಿಂದ 3 ಟನ್ (ಹೆಕ್ಟೇರಿಗೆ) |
| ಹೆಚ್ಚು ಅಂತರದ ಬೆಳೆಗಳು (ಹಣ್ಣು ಬೆಳೆಗಳು) | 3 ರಿಂದ 5 ಕೆ.ಜಿ. (ಗಿಡವೊಂದಕ್ಕೆ) |